ಶ್ರೀ ಎಚ್.ಎಸ್. ಸಿದ್ದಪ್ಪ.—ಸಕಲೇಶಪುರದ ಅಸಿಸ್ಟೆಂಟ್ ಕಮಿಶನರನ್ನು ಮೂರು ವರ್ಷಗಳ ಹಿಂದೆ ನೇಮಿಸಿದ್ದೀರಿ. ಅವರು ವರದಿ ಕೊಡುವುದಕ್ಕೆ ಎಷ್ಟು ವರ್ಷ ಹಿಡಿಯುತ್ತದೆ ಮತ್ತು ಅದರ ಪ್ರಕಾರ ಹಣವನ್ನು ರಿಕವರ್ ಮಾಡುವುದಕ್ಕೆ ಎಷ್ಟು ವರ್ಷ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಸಾರ್ವಜನಿಕರ ಹಣ ದುರುಪಯೋಗ ವಾದಾಗ ತಕ್ಷಣ ವಿಚಾರಣೆಯಾಗಬೇಕೆಂದು ಮಾನ್ಯ ಸದಸ್ಯರು ತೋರಿಸಿದ ಕಳಕಳಿಯನ್ನು ಒಪ್ಪಿಕೊಳ್ಳುತ್ತಾ ಬೇಗನೇ ಅವರಿಂದ ರಿಪೋರ್ಟು ತರಿಸಿಕೊಳ್ಳುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹಂಜೆ ಶಿವಣ್ಣ.—ಅನೇಕ ಕಡೆ ತಾಲ್ಲೂಕು ಬೋರ್ಡುಗಳಲ್ಲಿ ಹಣ ದುರುಪಯೋಗವಾದಾಗ ಅದರ ರಿಕವರಿ ಮಾಡುವುದಕ್ಕೆ 7-8 ವರ್ಷಗಳಾದರೂ ಕ್ರಮ ತೆಗೆದುಕೊಳ್ಳಲಿಲ್ಲ. ಅದೇರೀತಿ ಇದನ್ನು ಸಹ ಮಾಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.. ಅದರ ಬಗ್ಗೆ ಮತ್ತೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದೇನೆ.

SALE OF BOTTLED TODDY AND ARRACK

132 SRI B. SATYANARAYANA SINGH (Hospet).—Will the Chief Minister be pleased to state:—

(*a*) whether the Government has any proposal to take up by itself the bottling of toddy and arrack to stop adulteration and consequential malpractices in the sale;

(*b*) whether the Government has any proposal to arrange for the sale of only bottled toddy and arrack and post a Government Officer at the retail selling point ?

SRI N. HUTCHMATI GOWDA.—(Minister for Revenue) On behalf of Sri D. Devaraj Urs. (Chief Minister.)

(*a*) No.

(*b*) No.

ಶ್ರೀ ಬಿ ಸತ್ಯನಾರಾಯಣ ಸಿಂಗ್ :—ಎಕ್ಸೈಸ್ ಬಾಬುಗಳಿಂದ ಇನ್ನೂ ಹೆಚ್ಚಿನ ಉತ್ಪತ್ತಿ ಬರಬೇಕು ಎಂಬ ದೃಷ್ಟಿಯಿಂದ ಎರಡು ಸಲಹೆಗಳನ್ನು ಕೊಟ್ಟಿದ್ದೇನೆ. ಆ ಸಲಹೆಗಳನ್ನು ಕಾರ್ಯಗತ ಮಾಡಲು ಸರ್ಕಾರಕ್ಕೆ ಏನು ತೊಂದರೆ ಇದೆ ?

* ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದನ್ನು ಯಾವ ರೀತಿ ಬಾಟ್ಲಿಂಗ್ ಮಾಡಬೇಕೆಂದು ಸಿ. ಎಫ್. ಟಿ. ಆರ್. ಐ. ಯವರಲ್ಲಿ ಸಲಹೆ ಕೇಳಿದ್ದೇವೆ. ಇನ್ನೂ ಅವರು ಅದರ ಬಗ್ಗೆ ಏನೂ ಹೇಳಿಲ್ಲ. ಆದ್ದರಿಂದ ಟಾಡಿಯನ್ನು ಬಾಟ್ಲಿಯಲ್ಲಿ ಹಾಕತಕ್ಕ ಕಾರ್ಯಕ್ಕೆ ಕೈ ಹಾಕಿಲ್ಲ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ :—ಎರಡನೆಯ ಸಲಹೆ ಏನೆಂದರೆ.... ಮಾರಾಟ ಮಾಡುವ ಕೇಂದ್ರಗಳಲ್ಲಿ ಸರ್ಕಾರೀ ಸಿಬ್ಬಂದಿ ಇದ್ದರೆ, ಅಲ್ಲಿ ನೇರವಾಗಿ ಗಿಡಗಳಿಂದ ಬರುವ ಹೆಂಡವನ್ನು ಮಾರಾಟ ಮಾಡುವುದನ್ನು ನೋಡಿಕೊಳ್ಳಲು ಸಹಾಯವಾಗುತ್ತದೆ ಮತ್ತು ಅಡಲ್ಟ್ರೇಶನಿಗೂ ಅವಕಾಶ ಇರುವುದಿಲ್ಲ ಆದ್ದರಿಂದ ಈ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಏನು ಕಷ್ಟ ಇದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ಅರಕವನ್ನು ಬಾಟ್ಲಿಯಲ್ಲಿ ಹಾಕಿ ಕೊಡುತ್ತಿದ್ದೇವೆ. ಅವರೇ ಮಾಡಿಕೊಳ್ಳುವುದಕ್ಕೆ, ಎಕ್ಸೈಸ್ ರೂಲ್ಸ್ ಪ್ರಕಾರ ಎಕ್ಸೈಸ್ ಸುಪರ್‌ವೈಸ್ ಮಾಡಿಕೊಳ್ಳಬಹುದೆಂದು ತಿಳಿಸಿದ್ದೇವೆ.

ಶ್ರೀ ಎಸ್. ಬಂಗಾರಪ್ಪ :—ಅರಕವನ್ನು ಬಾಟ್ಲಿಗಳಲ್ಲಿ ತುಂಬಿಸಿ ಮಾರುವುದಕ್ಕೆ ಬೆಂಗಳೂರಿನಲ್ಲಿರುವ ನಂದೀ ಬ್ರುವರೀಸ್‌ನವರಿಗೆ ಅವಕಾಶ ಕೊಟ್ಟಿದ್ದೀರೆಂದು ಕಾಣುತ್ತದೆ. ಹೀಗೆ ಕೊಟ್ಟಿರುವುದರಿಂದ ಸರ್ಕಾರಕ್ಕೆ ತುಂಬಾ ನಷ್ಟವಾಗುತ್ತಿದೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ ಮತ್ತು ಅದನ್ನು ಸರ್ಕಾರದವರೇ ಏಕೆ ವಹಿಸಿಕೊಳ್ಳಬಾರದು ?

12-50 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಈಗ ನಂದಿ ಬ್ರೂಯರಿ ಅವರು ಅರಕಾವನ್ನು ಬಾಟಲ್ ಮಾಡಿ ಕೊಡತಕ್ಕ ವ್ಯವಸ್ಥೆ ಇದೆ, ಎಕ್ಸೈಜ್ ರೂಲ್ಸ್ ಪ್ರಕಾರ ಅವರು ಅರೆಕಾವನ್ನು ಬಾಟಲ್ ಮಾಡಿ ಮಾರಿಕೊಳ್ಳುವುದಕ್ಕೆ ಅವಕಾಶ ಇದೆ ಎಂದು ನಾನು ಈಗಾಗಲೇ ತಿಳಿಸಿದ್ದೇನೆ ಟಾಡಿಯನ್ನು ಕೂಡ ಬಾಟಲ್ ಮಾಡುವುದಕ್ಕೆ ವೆಸರ್ಸ್ ಸೋಮರಸ ಪ್ರಾಡಕ್ಟ್ಸ್ ಅಂಬಾಳ್ ಪಾಡಿ ಉಡುಪಿ ಇವರು 1972-73ರಲ್ಲಿ ಸರ್ಕಾರದಿಂದ ಪರ್ಮಿಟ್ ತೆಗೆದುಕೊಂಡಿದ್ದರು. ಅದರೆ ಈ ವರ್ಷ ಅವರು ಬಾಟಲ್ ಮಾಡುವುದಕ್ಕೆ ಅರ್ಜಿ ಹಾಕಿಲ್ಲ. ಈಗ ಇರತ ಕ್ಕಂಥಾ ಪರಿಸ್ಥಿತಿ ಇದು. ಬಾಕಿ ವಿವರಗಳು ಈಗ ನನ್ನಲ್ಲಿ ಇಲ್ಲ.

ಶ್ರೀ ಎಸ್. ಎಚ್. ಪುಟ್ಟರಂಗನಾಥ :—ಕಲಬೆರಕೆ ಹೆಂಡಸಾರಾಯಿ ಅನ್ನು ಮಾರಾಟ ಮಾಡತಕ್ಕದ್ದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ? ಮತ್ತು ಹೈಡ್ರಾಕ್ಸೈಡ್ ಅನ್ನು ಹೆಂಡ ಸಾರಾಯಿಯಲ್ಲಿ ಮಿಕ್ಸ್ ಮಾಡಿ ಮಾರುವುದರಿಂದ ಅದನ್ನು ಜನಗಳು ಕುಡಿದು ಕಣ್ಣು ರೋಗಕ್ಕೆ ತುತ್ತಾಗಿದ್ದಾರೆ. ಈ ಕಲಬೆರಕೆ ಹೆಂಡವನ್ನು ಕುಡಿದಂತಹ ಜನಗಳ ಕಣ್ಣುಗಳನ್ನು ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿದಾಗ ಕಣ್ಣು ತೂತು ಬಿದ್ದಿರತಕ್ಕ ನಿದರ್ಶನಗಳು ಇವೆ. ಆದ್ದರಿಂದ ಕಲಬೆರಕೆ ಹೆಂಡ ಮತ್ತು ಸಾರಾಯಿಯನ್ನು ಮಾರತೆಕ್ಕದ್ದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಏನು ಕ್ರಮ ಕೈಕೊಂಡಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ಆರೆಕಾವನ್ನು ಬಾಟಲ್ ಮಾಡುವುದಕ್ಕೆ ಸರ್ಕಾರದಿಂದ ಪರ್ಮಿಷನ್ ತೆಗೆದುಕೊಂಡು ಎಕ್ಸೈಜ್ ಅಧಿಕಾರಿಗಳ ಸಮಕ್ಷಮ ಬಾಟಲ್ ಮಾಡುವುದಕ್ಕೆ ಕಂಟ್ರಾಕ್ಟರಿಗೆ ಪರ್ಮಿಷನ್ ಕೊಟ್ಟಿದೆ ಎಂದು ತಾವು ಹೇಳಿದಿರಿ, ಆದರೆ ಎಕ್ಸೈಜ್ ಆಫೀಸರುಗಳು ಮತ್ತು ಎಕ್ಸೈಜ್ ಇನ್‌ಸ್ಪೆಕ್ಟರ್‌ಗಳು ಕಂಟ್ರಾಕ್ಟರುಗಳಿಗೆ ಬ್ರಾಂದಿ ಮತ್ತು ಆರೆಕಾವನ್ನು ಕಲಬೆರಕೆ ಮಾಡಿ ಬಾಟಲ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅಧಿಕಾರಿಗಳ ಸಮಕ್ಷಮ ಆರೆಕಾವನ್ನು ಬಾಟಲ್ ಮಾಡುವುದರ ಜೊತೆಗೆ ಲಕ್ಕರ್ ರೂಲ್ಸ್ ಬೇರೆ ಇದೆ ಆ ರೂಲ್ಸಿಗೆ ಅನುಗುಣವಾಗಿ ಎಕ್ಸೈಜ್ ಅಧಿಕಾರಿಗಳ ಸಮಕ್ಷಮ ಬಾಟಲ್ ಮಾಡಬೇಕು ಎಂದು ಇದೆ. ಇಂಥಾ ಕಡೆ ಆಫೀಸರುಗಳು ಇದನ್ನು ದುರುಪಯೋಗ ಮಾಡಿದ್ದರೆ ಅಥವಾ ಅವರು ಕಂಟ್ರಾಕ್ಟರುಗಳ ಜೊತೆಯಲ್ಲಿ ಶಾಮೀಲಾಗಿ ದುರುಪಯೋಗ ಪಡಿಸಿ ತಪ್ಪು ಮಾಡಿದ್ದರೆ ಅದು ಸರ್ಕಾರದ ಗಮನಕ್ಕೆ ಬಂದರೆ ಆ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ :—ಹೆಂಡರನ್ನು ಈಚಲು ಮರದಿಂದ ತೆಗೆದಾಗ ಇರುವ ಶಕ್ತಿ ಪ್ರಮಾಣಕ್ಕೂ ಮತ್ತು ಬಾಟಲ್ ಮಾಡಿದ ಮೇಲೆ ಇರುವ ಪ್ರಮಾಣಕ್ಕೂ ಹೋಲಿಸಿ ನೋಡಿ ಹೆಂಡದ ಪ್ರಮಾಣ ಸರಿಯಾಗಿದೆ ಎಂಬುದನ್ನು ನೋಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅದಕ್ಕೂ ಇದಕ್ಕೂ ಏನು ವ್ಯತ್ಯಾಸ ಇದೆ ಎಂಬುದು ಗೊತ್ತಿಲ್ಲ. ಆ ರೀತಿ ವ್ಯತ್ಯಾಸ ಮಾಡಿರುವುದನ್ನು ಹೇಳಿದರೆ ಆ ಬಗ್ಗೆ ಕ್ರಮತೆಗದುಕೊಳ್ಳಬಹುದು.

MADAM SPEAKER:—Question Nos. 165 and 195 may be taken up together.

TRACING OF SMT. SUMITRA DESAI

165. SRI J. L. KABADE (Ballolli):—

Will the Chief Minister be pleased to state:—

(*a*) the reasons for the failure of the Government in tracing Smt. Sumitra Desai who is responsible for creating couriosity in the minds of the people in Mysore State;

(*b*) the expenditure incurred by the Government for tracing Smt. Sumitra Desai up to 1-8-1973;

(*c*) the places in India and Mysore State where the State Government have attempted to trace Smt. Desai by deputing the police staff;

(*d*) whether police dogs maintained by the Government have been used in this case to trace the culprits;

(*e*) if so, the number of dogs used?

SRI N. HUTCHMASTHI GOWDA (Minister for Revenue) [On behalf of].—

SRI D. DEVARAJ URS (Chief Minister)

(*a*) The work of tracing Smt. Sumitra Desai is continuing.

(*b*) The C. I. D. Police Department have spent about Rs. 4,257-35 up to 1-8-1973 towards T. A. for tracing Smt. Sumitra Desai.

(*c*) The Police Staff was deputed to all the places found necessary for investigation.

(*d*) As no offence is under investigation in this case the question of tracing the culprits and using the police dogs for the same does not arise.

(*e*) Question does not arise.